ಅಧ್ಯಕ್ಷರು:– ಈ ಸದನವನ್ನು ರಾಜಕೀಯ ಚರ್ಚೆಗೆ ಬಳಸಿಕೊಳ್ಳಬೇಡಿ ಎಂದು ನಾನೂ ಹೇಳಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಆದರೆ ನಿನ್ನೆಯಿಂದ ಅದನ್ನು ಮಾಡಿಕೊಂಡರು. ಓಟ್ ಬ್ಯಾಂಕ್ ರಾಜಕಾರಣಕ್ಕೆ ಸದನ ದುರ್ಬಳಕೆ ಆಗುವುದಾದರೆ ಖಂಡಿತ ಇನ್ನು ಮುಂದೆ ಇದಕ್ಕೆ ಅವಕಾಶ ಕೊಡಬಾರದು.

ಆಹಾರ ಧಾನ್ಯ ಖರೀದಿ

31(1045); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಅನ್ನಭಾಗ್ಯ ಯೋಜನೆಗೆ ಸರ್ಕಾರದಿಂದ ಕಳೆದ ಎರಡು ವರ್ಷಗಳಲ್ಲಿ ಎಷ್ಟು ವಿವಿಧ ಧಾನ್ಯಗಳನ್ನು ಖರೀದಿಸಲಾಗಿದೆ; ಅದಕ್ಕೆ ತಗಲಿದ ವೆಚ್ಚ ಎಷ್ಟು;

ಆ) ಧಾನ್ಯಗಳನ್ನು ಯಾರಿಂದ ಖರೀದಿಸಲಾಗಿದೆ: ಯಾವ ರೂಪದಲ್ಲಿ, ಮಾನದಂಡದಲ್ಲಿ ಖರೀದಿಸಲಾಗಿದೆ; ಸಮಗ್ರ ವಿವರ ನೀಡುವುದು;

ಇ) ಧಾನ್ಯಗಳ ಖರೀದಿಯಲ್ಲಿ ಪಾರದರ್ಶಕತೆಯನ್ನು ಅನುಸರಿಸಲಾಗಿದೆಯೇ; ಖರೀದಿಯ ವಿವರ ನೀಡುವುದು;

ಈ) ಬೆಂಬಲ ಬೆಲೆ ಯೋಜನೆಯಡಿ ಪ್ರತಿ ವ್ಯಕ್ತಿಗೆ ನೀಡುವ 2013–14ನೇ ಸಾಲಿನಲ್ಲಿ ಹೆಚ್ಚಿನ ವ್ಯಯವಾಗುತ್ತಿದೆ. ಈ ವಿತರಣೆಯಲ್ಲಿ ಯೂನಿಟ್ ವ್ಯವಸ್ಥೆ ಜಾರಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಅನ್ನಭಾಗ್ಯ ಯೋಜನೆಗೆ ಅಗತ್ಯ ಧಾನ್ಯವನ್ನು ಕೊಳ್ಳುವಾಗ ಸಾಕಷ್ಟು ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) 2011ರ ಜನಗಣತಿ ಪ್ರಕಾರ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ ಎಷ್ಟು; ಎಷ್ಟು ಬಿಪಿಎಲ್ ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದೆಯೇ; ಈ ಸಂಖ್ಯೆಯಲ್ಲಿ ವ್ಯತ್ಯಾಸ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವ್ಯತ್ಯಾಸ ಸರಿಪಡಿಸಲು ಕೈಗೊಂಡ ಕ್ರಮ ಏನು (ವಿವರ ಒದಗಿಸುವುದು)?

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಅನ್ನಭಾಗ್ಯ ಯೋಜನೆಗೆ 2013–14ನೇ ಸಾಲಿನಲ್ಲಿ ಒಟ್ಟು 33,72,189.920 ಎಂ.ಟಿ ಆಹಾರಧಾನ್ಯ (ಅಕ್ಕಿ, ಗೋಧಿ ಮತ್ತು ರಾಗಿ) ವನ್ನು ಖರೀದಿಸಿದ್ದು, ಇದಕ್ಕಾಗಿ 3,046.04 ಕೋಟಿ ರೂ. ವೆಚ್ಚ ಭರಿಸಲಾಗಿರುತ್ತದೆ.

2014–15ನೇ ಸಾಲಿನಲ್ಲಿ ಅನ್ನಭಾಗ್ಯ ಯೋಜನೆಗಾಗಿ ಜನವರಿ–2015ರ ಮಾಹೆಯವರೆಗೆ ಒಟ್ಟು 27,51,232.131 ಎಂ.ಟಿ ಆಹಾರಧಾನ್ಯ (ಅಕ್ಕಿ, ಗೋಧಿ, ರಾಗಿ ಮತ್ತು ಜೋಳ) ವನ್ನು ಖರೀದಿಸಿದ್ದು ಇದಕ್ಕಾಗಿ ಡಿಸೆಂಬರ್–2014ರವರೆಗೆ 2,075.56 ಕೋಟಿ ರೂ. ವೆಚ್ಚ ಭರಿಸಲಾಗಿರುತ್ತದೆ. (ವರ್ಷವಾರು ಆಹಾರಧಾನ್ಯ ಖರೀದಿ ಮಾಹಿತಿ ಕೆಳಗಿನಂತಿದೆ) **"ಅನ್ನಭಾಗ್ಯ" ಯೋಜನೆಗೆ 2013–14 ನೇ ಸಾಲಿನಲ್ಲಿ ಖರೀದಿಸಲಾಗಿರುವ ಆಹಾರಧಾನ್ಯದ ವಿವರ:**

ಕ್ರ ಸಂ.	ಖರೀದಿಯ ಮೂಲ	ಪಡಿತರವಾರು ಖರೀದಿಯ ವಿವರ (ಮೆ.ಟನ್)		
		ಅಕ್ಕಿ	ಗೋಧಿ	ರಾಗಿ
1	ಕೇಂದ್ರದ ಹಂಚಿಕೆ	21,26,296.000	3,18,705.400	0
2	ಎಕನಾಮಿಕ್ ಕಾಸ್ಟ್	1,50,653.349	97,727.823	0
3	ಎನ್‌ಸಿಡಿಇಎಕ್ಸ್	2,89,489.585	000	5,717.785
4	ಛತ್ತೀಸ್‌ಘಡ್	1,53,638.966	000	0
5	ಎಂಎಸ್‌ಪಿ (*)	14,581.905	000	14,787.619
6	ಲೆವಿ(2012–13) (**)	17,333.397	000	0
7	ಲೆವಿ (2013–14) (***)	1,61,996.091	0	0

	ಒಟ್ಟು	29,35,251.293	4,16,433.223	20.505.404
	ಒಟ್ಟು ಖರೀದಿಸಿದ ಆಹಾರಧಾನ್ಯ	33,72,189.920		

2013–14 ನೇ ಸಾಲಿನಲ್ಲಿ ಆಗಿರುವ ಒಟ್ಟು ವೆಚ್ಚ (ಕೋಟಿಗಳಲ್ಲಿ)

ಸಾಲು	ಒದಗಿಸಿರುವ ಅನುದಾನ	ಒಟ್ಟು ವೆಚ್ಚ
2013–14	3,049.50	3,046.04

ಷರಾ: (*)2012–13ನೇ ಸಾಲಿನಲ್ಲಿ -------- ಭತ್ತವನ್ನು ಅಕ್ಕಿಯನ್ನಾಗಿ ಪರಿವರ್ತಿಸಿ ಚೀಟಿದಾರರಿಗೆ ವಿತರಣೆ ಮಾಡಲಾಗಿದೆ.

(**) 2012–13ನೇ ಸಾಲಿನಲ್ಲಿ ಖರೀದಿಸಿದ ----- ಸಾಲಿನ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲಾಗಿದೆ.

(***) 2013–14ನೇ ಸಾಲಿನಲ್ಲಿ 161996.091 ಮೆ.ಟ.ನ್. ಅಕ್ಕಿಯನ್ನು 2013–14ನೇ ಸಾಲಿನಲ್ಲಿ ಖರೀದಿಸಿದ್ದು, 2014–15ನೇ ಸಾಲಿನಲ್ಲಿ ವಿತರಿಸಲಾಗಿದೆ.

"ಅನ್ನಭಾಗ್ಯ" ಯೋಜನೆಗೆ 2014–15 ನೇ ಸಾಲಿನಲ್ಲಿ ಖರೀದಿಸಲಾಗಿರುವ ಆಹಾರಧಾನ್ಯದ ವಿವರ:

ಕ್ರ.	ಖರೀದಿಯ	ಪಡಿತರವಾರು ಖರೀದಿಯ ವಿವರ (ಮೆ.ಟನ್)

ಸಂ.	ಮೂಲ	ಅಕ್ಕಿ	ಗೋಧಿ	ರಾಗಿ	ಬಿಳಿ ಜೋಳ
1	ಕೇಂದ್ರದ ಹಂಚಿಕೆ (NFSA)	20,27.501	80,350	0.000	0.000
2	ಎಕನಾಮಿಕ್ ಕಾಸ್ಟ್	16,191.202	1,75,048	0.000	0.000
3	ಒಎಂಎಸ್ಎಸ್	0	4,37,400	0.000	0.000
	ಎಂ.ಎಸ್.ಪಿ	0	0	14,742.131	0.000
	ಒಟ್ಟು	**20,43,692**	**6,92,798**	**14,742.131**	**0.00**
	ಒಟ್ಟು ಖರೀದಿಸಿದ ಆಹಾರಧಾನ್ಯ	**27,51,232.131**			

2014–15ನೇ ಸಾಲಿನಲ್ಲಿ ಆಗಿರುವ ಒಟ್ಟು ವೆಚ್ಚ (ಡಿಸೆಂಬರ್–2014ರ ವರೆಗೆ) (ಕೋಟಿಗಳಲ್ಲಿ)

ಸಾಲು	ಒದಗಿಸಿರುವ ಅನುದಾನ	ಒಟ್ಟು ವೆಚ್ಚ
2014–15	4,365 000	2,075.560

ಆ) ಅನ್ನಭಾಗ್ಯ ಯೋಜನೆಗೆ ಅಗತ್ಯವಿರುವ ಆಹಾರಧಾನ್ಯಗಳನ್ನು ಭಾರತ ಆಹಾರ ನಿಗಮ, ಛತ್ತೀಸ್‌ಘರ್ ಆಹಾರ ನಿಗಮ, ಮತ್ತು ರೈತರಿಂದ ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸಿರುವ ಭತ್ತವನ್ನು ಅಕ್ಕಿಯನ್ನಾಗಿ ಪರಿವರ್ತಿಸಿ, ಅಕ್ಕಿ ಗಿರಣಿಗಳಿಂದ ಲೆವಿ ರೂಪದಲ್ಲಿ ಹಾಗೂ NCDEX ಮೂಲಕ ಇ–ಹರಾಜಿನಲ್ಲಿ ಸರಾಸರಿ ಸಾಮಾನ್ಯ ಗುಣಮಟ್ಟ (FAQ)

ಮಾನದಂಡಗಳಿಗೆ ಅನುಗುಣವಾಗಿ ಖರೀದಿಸಲಾಗಿದೆ. ಖರೀದಿಗೆ ಸಂಬಂಧಿಸಿದ ಸಮಗ್ರ ವಿವರಗಳನ್ನು ಪ್ರಶ್ನೆ 'ಅ'ನಲ್ಲಿ ಉತ್ತರಿಸಲಾಗಿದೆ.

ಇ) ಹೌದು, ವಿವರಗಳು 'ಅ' ಪ್ರಶ್ನೆಯಲ್ಲಿ ಉತ್ತರಿಸಿದೆ.

ಈ) ಕೇಂದ್ರ ಸರ್ಕಾರವು ಆಹಾರ ಭದ್ರತಾ ಕಾಯ್ದೆಯನ್ವಯ ಪಡಿತರ ಚೀಟಿಯಲ್ಲಿನ ಕುಟುಂಬ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಪ್ರತಿ ಸದಸ್ಯರಿಗೆ 5 ಕೆ.ಜಿ. ಆಹಾರಧಾನ್ಯವನ್ನು ವಿತರಿಸುತ್ತಿದೆ. ರಾಜ್ಯ ಸರ್ಕಾರವು ಅನ್ನಭಾಗ್ಯ ಯೋಜನೆಯಡಿಯಲ್ಲಿ ಏಕ ಸದಸ್ಯ ಕುಟುಂಬಕ್ಕೆ 10 ಕೆ.ಜಿ., ದ್ವಿ ಸದಸ್ಯ ಕುಟುಂಬಕ್ಕೆ 20 ಕೆ.ಜಿ., ಮೂರು ಮತ್ತು ಅದಕ್ಕಿಂತ ಹೆಚ್ಚಿನ ಸದಸ್ಯರಿರುವ ಕುಟುಂಬಕ್ಕೆ 30 ಕೆ.ಜಿ. ಆಹಾರ ಧಾನ್ಯ ಹಾಗೂ 6 ಮತ್ತು ಅದಕ್ಕಿಂತ ಹೆಚ್ಚಿನ ಸದಸ್ಯರುಗಳುಳ್ಳ ಪಡಿತರ ಚೀಟಿಗೆ ಪ್ರತಿ ಸದಸ್ಯರಿಗೆ 5 ಕೆ.ಜಿ.ಯಂತೆ ಆಹಾರಧಾನ್ಯವನ್ನು ವಿತರಿಸಲಾಗುತ್ತಿದೆ. ಈ ವಿತರಣೆಯಲ್ಲಿ ಯೂನಿಟ್ ವ್ಯವಸ್ಥೆ ಜಾರಿ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಉ) ಯಾವುದೇ ಅವ್ಯವಹಾರ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) 2011ರ ಜನಗಣತಿಯಂತೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆಯ ಮಾಹಿತಿ ಲಭ್ಯವಿರುವುದಿಲ್ಲ. ಆದರೆ 2011ರ ಜನಗಣತಿಯಂತೆ ರಾಜ್ಯದ ಒಟ್ಟು 13179911 ಕುಟುಂಬಗಳಿದ್ದು, ಈ ಅನುಪಾತಕ್ಕೆ ರಾಜ್ಯದಲ್ಲಿ ಒಟ್ಟು 79.70% ಬಿಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ. (ಜಿಲ್ಲಾವಾರು ವಿವರವನ್ನು ಲಗತ್ತಿಸಿದೆ).

ಅಧ್ಯಕ್ಷರು:– ಆಯಿತು, ಈಗ ಪ್ರಶ್ನೋತ್ತರ.

ಡಾ॥ ಕೆ. ಸುಧಾಕರ್:– ನನಗೆ ಉತ್ತರ ಬಂದಿಲ್ಲ.

ಶ್ರೀ ದಿನೇಶ್ ಗುಂಡೂರಾವ್:– ಉತ್ತರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು:– ನೀವು ಪ್ರಶ್ನೆ ಕೇಳಿ. ಉತ್ತರವನ್ನು ಹೇಳುತ್ತಾರೆ. ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇವೆ. ಪ್ರಶ್ನೆಗಳಿಗೆ ಉತ್ತರಗಳು ಬಹಳ ವಿಳಂಬವಾಗಿ ಬರುತ್ತಿವೆ. ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಡಿ. ಸದನ ನಡೆಯುವುದು ಹತ್ತು ದಿವಸ. ಈ ಸಂದರ್ಭದಲ್ಲಿ ಬಂದಂಥ ಪ್ರಶ್ನೆಗಳಿಗೆ ನಾವು ಉತ್ತರವನ್ನು ಕೊಡದೇ ಹೋದರೆ ಸಮಯ ವ್ಯರ್ಥವಾಗುತ್ತದೆ. ದಯವಿಟ್ಟು ಇದನ್ನು ಎಲ್ಲರೂ ಗಮನದಲ್ಲಿ ಇಟ್ಟುಕೊಳ್ಳಿ ಎಂದು ನಾನು ವಿನಂತಿ ಮಾಡುತ್ತೇನೆ.

ಡಾ॥ ಕೆ. ಸುಧಾಕರ್:– ಬಿ.ಪಿ.ಎಲ್. ಕಾರ್ಡ್‌ಗಳು ನಿಜವಾದಂಥ ಫಲಾನುಭವಿಗಳು ಯಾರಿಗೆ ಸಿಗಬೇಕಾಗಿತ್ತೋ ಅವರಿಗೆ ಸಿಗುವಲ್ಲಿ ವಿಳಂಬವಾಗಿದೆ. ಇದಕ್ಕೆ ಸರ್ವರ್‌ಗಳ ಸಮಸ್ಯೆ ಎಂದು ಹೇಳುತ್ತಾರೆ. ಈ ಸರ್ವರ್‌ಗಳ ಸಮಸ್ಯೆಯನ್ನು ಯಾವಾಗ ನಿವಾರಣೆ ಮಾಡುತ್ತಾರೆ ಎಂದು ಮಾನ್ಯ ಸಚಿವರು ತಿಳಿಸಿ ಕೊಡಬೇಕು.

ಶ್ರೀ ದಿನೇಶ್ ಗುಂಡೂರಾವ್:– ಅವರು ಕೇಳಿರುವುದರಲ್ಲಿ ಈ ಪ್ರಶ್ನೆಯನ್ನು ಕೇಳಿಲ್ಲ. ಅವರು ಕೇಳಿರುವುದು ಏನೆಂದರೆ, ಯಾವ ರೀತಿಯಾಗಿ ನೀವು ಆಹಾರಧಾನ್ಯಗಳನ್ನು ಖರೀದಿ ಮಾಡುತ್ತಿದ್ದೀರಿ, ಇದನ್ನು ನೀವು ಪಾರದರ್ಶಕವಾಗಿ ಖರೀದಿ ಮಾಡುತ್ತಿರುವಿರಾ ಎನ್ನುವ ಪ್ರಶ್ನೆಗಳನ್ನು ಕೇಳಿದ್ದಾರೆ. ಅವುಗಳಿಗೆಲ್ಲ ಸಂಪೂರ್ಣವಾದ ಉತ್ತರವನ್ನು ನೀಡಿದ್ದೇವೆ.

ಡಾ॥ ಕೆ. ಸುಧಾಕರ್:– ನಾನು ಕೇಳಿರುವ ಪ್ರಶ್ನೆಯಲ್ಲಿ ಇದೆ.

ಶ್ರೀ ದಿನೇಶ್ ಗುಂಡೂರಾವ್:– ಅವರು ಕೊನೆಯ ಪ್ರಶ್ನೆಯಲ್ಲಿ 2011ರ ಜನಗಣತಿಯ ಪ್ರಕಾರ ಎಷ್ಟು ಕಾರ್ಡ್‌ಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ. ನಾವು ಅದಕ್ಕೂ ಕೂಡ ಉತ್ತರ ಕೊಟ್ಟಿದ್ದೇವೆ. ಆದರೆ ಅವರು ಕೆಲವು ಸಮಸ್ಯೆಗಳಿವೆ ಎಂದು ಹೇಳಿದ್ದಾರೆ. ಖಂಡಿತವಾಗಿಯೂ ಕೆಲವು ಸಮಸ್ಯೆಗಳಿವೆ, ಇಲ್ಲ ಎಂದು ಹೇಳುವುದಿಲ್ಲ.

ಅಧ್ಯಕ್ಷರು:– 2011ರ ಜನಗಣತಿಯಂತೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆಯ ಮಾಹಿತಿ ಲಭ್ಯವಿರುವುದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದೀರಿ.

ಶ್ರೀ ದಿನೇಶ್ ಗುಂಡೂರಾವ್:– ಹೌದು, ಜನಗಣತಿಯಲ್ಲಿ ಅವರು economic status ಹೇಳುವುದಿಲ್ಲ. ಆದ್ದರಿಂದ ಜನಗಣತಿಯ ಪ್ರಕಾರ ಅದು ಲಭ್ಯವಿರುವುದಿಲ್ಲ. Planning Commission ನವರು ಹೇಳುವಂತೆ ಅವರದ್ದೇ ಆದ ಮಾನದಂಡವಿದೆ. ಆಹಾರ ಭದ್ರತೆ ಕಾಯಿದೆ ಪ್ರಕಾರ ಕರ್ನಾಟಕ ರಾಜ್ಯಕ್ಕೆ ನಗರ ಪ್ರದೇಶಗಳಲ್ಲಿ 49% ಕೊಡಬಹುದು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 74% ಕೊಡಬಹುದು.

ಅಧ್ಯಕ್ಷರು:– ಸುಧಾಕರ್‌ರವರೆ, ನಿಮ್ಮಲ್ಲಿ ಒಂದು ವಿನಂತಿ ಏನೆಂದರೆ, ಇದೊಂದು ದೊಡ್ಡ ಪ್ರಶ್ನೆ ಆಗಿದೆ. ಇವುಗಳನ್ನು ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದು. ಪ್ರಶ್ನೋತ್ತರದಲ್ಲಿ ಚರ್ಚೆ ಮಾಡುವುದಕ್ಕಿಂತ ಬೇರೆ ರೀತಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನೋಟೀಸ್ ಕೊಡಿ. ಅವಕಾಶ ಮಾಡಿಕೊಡುತ್ತೇನೆ.

ಡಾ॥ ಕೆ. ಸುಧಾಕರ್:– ಮಾನ್ಯ ಅಧ್ಯಕ್ಷರೆ, ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ. ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ.

ಅಧ್ಯಕ್ಷರು:– ಆಯಿತು, ಮಾಡೋಣ. ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಹಾಕಿಕೊಡುತ್ತೇನೆ.

ಜಮೀನು ದುರ್ಬಳಕೆ

32(675); ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಅ) ಇಂಡಿ ಪಟ್ಟಣದ ಬ್ಲಾಕ್ ನಂ: 582/ಬಿರಲ್ಲಿನ 1 ಇಕರೆ 30 ಗುಂಟೆ ಜಮೀನನ್ನು ಕುಷ್ಠರೋಗ ಮತ್ತು ಸಮುದಾಯ ಕಲ್ಯಾಣ ಕೇಂದ್ರಕ್ಕೆಂದು ಸಾರ್ವಜನಿಕ ಉದ್ದೇಶಕ್ಕಾಗಿ ಹಂಚಿಕೆ ಮಾಡಿದ್ದು ನಿಜವೆ;